**ಸಾಕ್ಷಿಗೆ ದಿನಾಂಕಃ19-03-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. BPR ವಕೀಲರಿಂದ ::**

ನಾನು ಯಾವುದೇ ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಸಹಿ ಮಾಡಲು ಬರುತ್ತದೆ. ಯಾವುದೇ ದಾಖಲೆಯಲ್ಲಿ ಇರುವ ವಿಚಾರಗಳು ನನಗೆ ಬೇರೆಯವರು ಓದಿ ಹೇಳಿದಾಗ ನನಗೆ ತಿಳಿದು ಬರುತ್ತದೆ ಎಂದರೆ ಸರಿ. ವಾದಿಗಳು ಯಾವ ಕಾರಣಕ್ಕೆ ನನಗೆ ಈ ದಾವೆಯನ್ನು ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಡಿ3 ಪಹಣಿಯು 4 ನೇ ವಾದಿ/ಸುರೇಶ್ ಎ ಎಸ್ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನಾನು ಪಹಣಿಗಳನ್ನು ಯಾವ ಕಾರಣಕ್ಕೆ ಹಾಜರುಪಡಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಆ ವಿಚಾರದ ಬಗ್ಗೆ ನಾನು ನನ್ನ ವಕೀಲರ ಮುಖಾಂತರ ತಿಳಿದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನಗೆ ಓದಲು ಬರೆಯಲು ಬರದ ಕಾರಣ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಸರ್ವೇ ದಾಖಲೆಯನ್ನು ಯಾವ ಕಾರಣಕ್ಕೆ ಹಾಜರುಪಡಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಕೆ ಎಂ ಶಂಕರಪ್ಪ ರವರು ಸರ್ವೇ ನಂಬರ್ 49/3 ರಲ್ಲಿ ದಿಃ 27.11.1972 ರಂದು ನೋಂದಾಯಿತ ಕ್ರಯಪತ್ರದ ಮುಖಾಂತರ 2 ಎಕರೆ 14 ಗುಂಟೆ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಿಃ 16.05.1973 ರಂದು ಸಾವಿತ್ರಮ್ಮ ದಾವಾ ಸರ್ವೇ ನಂಬರ್ 49 ರಲ್ಲಿ 1 ಎಕರೆ 20 ಗಂಟೆ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಸರ್ವೇ ನಂಬರ್ 49 ರ ಸ್ವತ್ತನ್ನು ಯಾವ ಸಾಲಿನಲ್ಲಿ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಂತರದಲ್ಲಿ ಸರ್ವೇ ನಂಬರ್ 49 ರಲ್ಲಿ ಬಾಕಿ ಉಳಿದ ಜಮೀನು ಅನ್ನು ನನ್ನ ತಂದೆ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಅವರ ಸ್ವತ್ತನ್ನು ಯಾವ ಸಾಲಿನಲ್ಲಿ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯನ್ನು ಸರ್ವೇ ನಂಬರ್ 49/3 ಗೆ ಸಂಬಂಧಪಟ್ಟಂತೆ ಇಸಿ ಯನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. ನನ್ನ ತಂದೆಯ ಮಾರಾಟಗಾರರಿಗೆ ನಾನು ಹೇಳುವಂತೆ ಸರ್ವೇ ನಂಬರ್ 49/3 ರಲ್ಲಿ 1 ಎಕರೆ 30 ಗುಂಟೆ ಮಾರಾಟ ಮಾಡಿರುವ ಅಧಿಕಾರ ಉಳಿದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಗಳ

ಕುಟುಂಬಕ್ಕೆ ಪರವಾಗಿ ಆಗಿರುವ ಕ್ರಯಪತ್ರಮ್ಮ ನಮ್ಮ ಕುಟುಂಬದವರು ಇವರೆಗೂ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಸಾವಿತ್ರಮ್ಮ ರವರು ಖರೀದಿ ಮಾಡಿರುವ ಆಸ್ತಿಗೆ ಸಂಬಂಧಪಟ್ಟಂತೆ ಕ್ರಯಪತರವನ್ನು ನಮ್ಮ ನಮ್ಮ ಕುಟುಂಬದವರು ಇವರೆಗೂ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ನನ್ನ ತಂದೆ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಿರುವ ಆಸ್ತಿಗೆ ಸಂಬಂಧಪಟ್ಟಂತೆ ನಾವು ಯಾವುದೇ ಪರಿಹಾರವನ್ನು ಕೇಳಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಪರಿಹಾರ ಕೋರಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ವಾದಿಗಳ ಕುಟುಂಬದ ಪರವಾಗಿ ಖಾತೆ ಇಲ್ಲದ ಕಾರಣ ದುರುದ್ದೇಶದಿಂದ ಅವರ ಮಾಲೀಕತ್ವವನ್ನು ನಾವುಗಳು ಅಲ್ಲೇಗಳೆಯುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ.

1972 ರಲ್ಲಿ ಶಂಕರಪ್ಪ ರವರು ಕೊಂಡು ಕೊಂಡ ಕ್ರಯಪತ್ರದ ಆಧಾರದ ಮೇಲೆ ದಾವಾ ಶೆಡ್ಯೂಲ್ ಸ್ವತ್ತಿಗೆ ಮಾಲೀಕರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯನ್ನು ಅವರ ಹೆಸರಿಗೆ ಬದಲಾವಣೆ ಮಾಡಿಕೊಡಲು ಎಸಿ ರವರ ನ್ಯಾಯಾಲಯದಲ್ಲಿ ಪ್ರಕರಣ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸರ್ವೆ ನಂಬರ್ 49/3 ರಲ್ಲಿ ಸಾವಿತ್ರಮ್ಮ ರವರು ಕೊಂಡ ಆಸ್ತಿಯನ್ನು ಹೊರತುಪಡಿಸಿ ಉಳಿಕೆ ಜಾಗವು ಅಡಿಕೆ ತೋಟ ಆಗಿರುತ್ತದೆ ಎಂದರೆ ನಮ್ಮ ತೋಟ ಅಡಿಕೆ ತೋಟ ಆಗಿದ್ದು ವಾದಿಗಳ ಜಮೀನಿನ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 49/3 ರಲ್ಲಿ ಒಟ್ಟು ಎಷ್ಟು ಜನ ಹಿಸ್ಸೆದಾರರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: